ದಿಃ 17-01-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಮುಂದುವರೆದ ಪಾಟೀ ಸವಾಲು 1 ನೇ ಪ್ರತಿವಾದಿಯ ವಾರಸುದಾರರ ಪರವಾಗಿ ಶ್ರೀ ಎಸ್.ವಿ.ಕೆ. ರವರಿಂದಃ-**

**7.** ನಾನು ಖರೀದಿ ಮಾಡಿಕೊಳ್ಳುವ ಆಸ್ತಿ ವಿಚಾರವಾಗಿ ಸುಭಾಷ್ ಪಾಟೀಲ್ ರವರಿಗೆ ನಗದು ರೂಪದಲ್ಲಿ ಹಣವನ್ನು ನೀಡಿರುತ್ತೇನೆ . ನಾನು ದಿನಾಂಕ 16.09.2010 ರಂದು ಖರೀದಿ ಮಾಡಿಕೊಳ್ಳುವ ಸಂದರ್ಭದಲ್ಲಿ ಸುಭಾಷ್ ಪಾಟೀಲ್ ರವರು ಮಾಲೀಕರು ಮತ್ತು ಸ್ವಾಧೀನದಲ್ಲಿ ಇರುತ್ತಾರೆ ಎಂದು ತೋರಿಸಲುದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ . ಖರೀದಿ ಮಾಡಿದ ಆಸ್ತಿಗೆ ಸಂಬಂಧಪಟ್ಟಂತೆ ಅಪ್ರೂವಡ್ ಲೇ ಔಟ್ ಮತ್ತು ಎನ್.ಎ ಆದೇಶವನ್ನು ಸುಭಾಷ್ ಪಾಟೀಲ್ ರವರಿಗೆ ತೋರಿಸಿರುವುದಿಲ್ಲ ಎಂದರೆ ಸರಿ. ದಿನಾಂಕ 16.09.2010 ರ ಕ್ರಯಪತ್ರದ ಡ್ರಾಫ್ಟ್ ನ್ನು ಶಿಂಧೆ ವಕೀಲರು ಮಾಡಿರುತ್ತಾರೆ. ಶಿಂಧೆ ವಕೀಲರಿಗೆ ಮಾಹಿತಿಯನ್ನು ಸುಭಾಷ್ ಪಾಟೀಲ್ ರವರು ನೀಡಿರುತ್ತಾರೆ, ಆ ಸಂದರ್ಭದಲ್ಲಿ ನಾನು ಇರಲಿಲ್ಲ . ನಾನು ಆ ಸಮಯದಲ್ಲಿ ಹಾಜರಿರದೆ ಇರುವುದರಿಂದ ಸುಭಾಷ್ ಪಾಟೀಲ್ ರವರು ವಕೀಲರಿಗೆ ಏನು ಮಾಹಿತಿಯನ್ನು ನೀಡಿರುತ್ತಾರೆ ಎಂದು ನನಗೆ ವೈಯಕ್ತಿಕವಾಗಿ ಗೊತ್ತಿರುವುದಿಲ್ಲ ಎಂದರೆ ಸರಿ . ಖರೀದಿ ಪತ್ರವನ್ನು ತಯಾರಿಸುವ ಸಮಯದಲ್ಲಿ ಯಾರು ಸಾಕ್ಷಿದಾರರು ಇದ್ದರು ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ . ಖರೀದಿ ಪತ್ರವು ಯಾವ ಸಮಯದಲ್ಲಿ ಮಾಡಲಾಗಿದೆ ಎಂದು ನನಗೆ ನೆನಪಿಲ್ಲ. ಖರೀದಿ ಪತ್ರದ ಸಾಕ್ಷಿದಾರರು ಯಾರು ಮತ್ತು ಯಾವ ಗ್ರಾಮದವರು ಇರುತ್ತಾರೆ ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿ . ನಾನು ನನ್ನ ಸಹಿಯನ್ನು ಖರೀದಿ ಪತ್ರಕ್ಕೆ ನೊಂದಣಿ ಕಛೇರಿಯಲ್ಲಿ ಸಹಿ ಮಾಡಿರುತ್ತೇನೆ . ನಾನು, ಸಾಕ್ಷಿದಾರರು ಮತ್ತು

ಸುಭಾಷ್ ಪಾಟೀಲ್ ರವರು ಸೇರಿಕೊಡು ಖೊಟ್ಟಿಯಾಗಿ ಖರೀದಿ ಪತ್ರವನ್ನು ತಯಾರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸುಭಾಷ್ ಪಾಟೀಲ್ ರವರು ಈಗ ಮೃತರಾಗಿರುತ್ತಾರೆ.

**8.** ಗ್ರಾಮ ಪಂಚಾಯಿತಿಯ ದಾಖಲೆಗಳಲ್ಲಿ ನಮ್ಮ ಹೆಸರನ್ನು ಸೇರಿಸಿಕೊಳ್ಳುವ ಪೂರ್ವದಲ್ಲಿ 1 ನೇ ಪ್ರತಿವಾದಿಯ ಹೆಸರಿತ್ತು ಎಂದರೆ ಸರಿಯಲ್ಲ. ದಿನಾಂಕ 16.09.2010 ರಂದು ಖರೀದಿ ಮಾಡುವ ಸಮಯದಲ್ಲಿ ಪಂಚಾಯಿತಿ ದಾಖಲೆಗಳಲ್ಲಿ ಯಾರ ಹೆಸರಿನಲ್ಲಿ ಆಸ್ತಿ ಇರುತ್ತದೆ ಎಂದು ನಾನು ನೋಡಿರುವುದಿಲ್ಲ. 2010 ರಲ್ಲಿ ಪ್ರತಿವಾದಿಯರ ಹೆಸರು , ಮಾಲೀಕರು ಮತ್ತು ಭೋಗಾಟೆದಾರರು ಇದ್ದರೂ ಸಹ ಅವರಿಗೆ ಗೊತ್ತಿಲ್ಲದೆ ನಾನು ಖರೀದಿ ಪತ್ರವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ . ಸುಭಾಷ್ ಪಾಟೀಲ್ ರವರು ನನಗೆ ಪ್ರತ್ಯಕ್ಷ ಕಬ್ಜೆಯನ್ನು ಎಂದೂ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ . 2010 ರಲ್ಲಿ ಗ್ರಾಮ ಪಂಚಾಯಿತಿ ದಾಖಲೆಗಳಲ್ಲಿ ನನ್ನ ಹೆಸರನ್ನು ನಮೂದಿಸಲು ಪ್ರಯತ್ನಿಸಿರುತ್ತೀರಾ ಎಂದರೆ ಸಾಕ್ಷಿಯು ಕಾರ್ಪೊರೇಷನ್ ನಲ್ಲಿ ನನ್ನ ಹೆಸರನ್ನು ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಕಾರ್ಪೊರೇಷನ್ ದಾಖಲೆಯಲ್ಲಿ ಪ್ಲಾಟಿಗೆ ಸಂಬಂಧಪಟ್ಟಂತೆ ಹೆಸರನ್ನು ನೊಂದಾಯಿಸಬೇಕಾದರೆ ಎನ್.ಎ ಆದೇಶ ಮತ್ತು ಬುಡಾ ಪ್ಲಾನ್ ಹಾಗೂ ಖರೀದಿ ಪತ್ರವನ್ನು ತೆಗೆದುಕೊಂಡು ಹೆಸರನ್ನು ನೊಂದಣಿ ಮಾಡಿಕೊಳ್ಳುತ್ತಾರೆ ಎಂದರೆ ಸಾಕ್ಷಿಯು ನಮ್ಮ ಏರಿಯಾ ಇಲ್ ಲೀಗಲ್ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಖರೀದಿಸಿದ ಪ್ರದೇಶವು ಬೇಕಾಯಿದೆ ಶಿರ ಇರುವ ಕಾರಣ ನಮ್ಮ ಖರೀದಿ ಪತ್ರವು ಕಾನೂನುಬದ್ಧವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕಾರ್ಪೊರೇಷನ್ ರವರ ಜೊತೆ ಹೊಂದಾಣಿಕೆ ಮಾಡಿಕೊಂಡು ಬೆಕಾಯಿದೆ ಶಿರ ಆಗಿ ನನ್ನ ಹೆಸರನ್ನು ನೊಂದಾಯಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**9.** 1 ಮತ್ತು 2 ನೇ ಪ್ರತಿವಾದಿಯರ ಮಧ್ಯೆ ಏನು ಜಗಳ ಇರುತ್ತದೆ ಎಂದು ನನಗೆ ವೈಯಕ್ತಿಕವಾಗಿ ಗೊತ್ತಿರುವುದಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯು ಹಾಕಿದ ಬೇಲಿಯನ್ನು ಬೇಕಾಯಿದೆಶಿರ ಆಗಿ ನಾನು ತೆಗೆದುಹಾಕಿರುತ್ತೇನೆ ಎಂದರೆ ಸರಿಯಲ್ಲ. 2010 ರ ಪೂರ್ವದಿಂದ 1 ನೇ ಪ್ರತಿವಾದಿಯು ತೆರಿಗೆಯನ್ನು ನೀಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ಪ್ಲಾಟಿನಲ್ಲಿ ಕಟ್ಟಡವನ್ನು ನಿರ್ಮಾಣ ಮಾಡಲು ಬೇಕಾದ ಕಟ್ಟಡದ ಅನುಮತಿ ಪತ್ರದ ಕುರಿತು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ತೆರಿಗೆ ರಶೀದಿಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ತೆರಿಗೆ ರಶೀದಿಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಹಾಕಿದ ಬೇಲಿಗೆ ಸಂಬಂಧಪಟ್ಟಂತೆ ನಾನು ಫೋಟೋವನ್ನು ತೆಗೆದು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಮತ್ತು ನಮ್ಮ ಮಧ್ಯೆ ಯಾವುದೇ ತಂಟೆ ತಕರಾರು ಆಗಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಯರಿಗೆ ಗೊತ್ತಿಲ್ಲದೆ ದಾಖಲೆಗಳನ್ನು ಸೃಷ್ಟಿಸಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ನಮ್ಮ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ಬುಡಾದಿಂದ ಲೇ ಔಟ್ ಆದ ಬಗ್ಗೆ ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಎನ್.ಎ ಆದೇಶ ಆಗಿರುವ ಕುರಿತೂ ಸಹ ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ದಿನಾಂಕ 16.09.2010 ಎಂದರೆ ನಾನು ಖರೀದಿಸಿದ ದಿನದಿಂದ ಆಸ್ತಿಯಲ್ಲಿ ಪ್ರತ್ಯಕ್ಷ ಕಬ್ಜೆಯಲ್ಲಿರುವುಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಕರಾರಿನ ಕುರಿತು ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಅದೇ ರೀತಿ 2 ನೇ ಪ್ರತಿವಾದಿಯ ತಕರಾರಿನ ಕುರಿತು ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನಾನು ಖರೀದಿ ಮಾಡುವ

ಪೂರ್ವದಲ್ಲಿ ಯಾವುದೇ ಪತ್ರಿಕಾ ಪ್ರಕಟಣೆಯನ್ನು ನೀಡಿರುವುದಿಲ್ಲ ಎಂದರೆ ಸರಿ . ಪ್ರತಿವಾದಿಯರ ಹಕ್ಕನ್ನು ಮೊಟಕುಗೊಳಿಸುವ ಉದ್ದೇಶದಿಂದ ನಾನು ಖೊಟ್ಟಿ ಖರೀದಿ ಪತ್ರವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**